## ಬಡ್ಡಿ ರಿಯಾಯಿತಿ ಯೋಜನೆಯ ಅವಧಿಯನ್ನು ವಿಸ್ತರಿಸುವುದು

೧೮೫೭. ಶ್ರೀ ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ರೈತರು ಸಹಕಾರಿ ಸಂಘಗಳಲ್ಲಿ ಪಡೆದಿರುವ ಸಾಲದ ಮೇಲಿನ ಬಡ್ಡಿ ಹಾಗೂ ಸಂಸ್ಥಿ ಬಡ್ಡಿಯನ್ನು ಎರಡೂ ಬಾರಿ ರಿಯಾಯಿತಿ ಮಾಡಿ ಸಾಲದ ಅಸಲನ್ನು ಕಟ್ಟಲು ೩೦-೪-೧೯೮೮ ರೊಳಗೆ ಅವಧಿ ನಿಗದಿ ಮಾಡಿದ್ದರಿಂದ ರೈತರಿಗೆ ತೊಂದರೆಯಾಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ರೈತರು ಬೆಳೆದ ಅಡಿಕೆ, ಭತ್ತ ಮತ್ತು ಇನ್ನಿತರ ಪದಾರ್ಥಗಳಿಗೆ ಮಾರುಕಟ್ಟೆಯಲ್ಲಿ ಬಹಳ ನಿಕೃಷ್ಟ ಬೆಲೆ ಇದ್ದುದ್ದರಿಂದ ಸಹಕಾರಿ ಸಂಘಗಳ ಸಾಲದ ಅಸಲನ್ನು ಕಟ್ಟಲು ೩೦-೪-೧೯೮೮ರ ತನಕ ಮುಂದುವರಿಸಲು ಆಲೋಚಿಸಲಾಗಿದೆಯೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

ಅ) ಸಹಕಾರ ಸಂಘಗಳ ಮೂಲಕ ಪಡೆದಿರುವ ಕೃಷಿ ಸಾಲಗಳ ಮರುಪಾವತಿಗೆ ಸಂಬಂಧಿಸಿದಂತೆ ಸರ್ಕಾರವು ಮಂಜೂರು ಮಾಡಿರುವ ಬಡ್ಡಿ ರಿಯಾಯಿತಿ ಯೋಜನೆಯಿಂದ ರೈತರಿಗೆ ಅನುಕೂಲವಾಗಿದೆ.

ಆ) ಇಲ್ಲ.

## ಮಂಗಳೂರು ತಾಲ್ಲೂಕಿನಲ್ಲಿ ವಿಧವಾ, ವೃದ್ಧಾಪ್ಯ, ಅಂಗವಿಕಲರ ಮಾಸಾಶನದ ಬಗ್ಗೆ

೧೭೪೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕಿನಲ್ಲಿ ವಿಧವಾ ಮಾಸಾಶನ, ವೃದ್ಧಾಪ್ಯ ವೇತನ, ಅಂಗ ವಿಕಲ ವೇತನಗಳನ್ನು ಎಷ್ಟು ಜನರಿಗೆ ಕೊಡಲಾಗಿದೆ (ಪ್ರತಿ ವರ್ಷದ ವಿವರ ನೀಡುವುದು) ;

ಆ) ಇನ್ನು ಬಾಕಿ ಉಳಿದಿರುವ ಅರ್ಜಿಗಳೆಷ್ಟು ?

ಇ) ಇವುಗಳ ವಿಲೇವಾರಿ ಎಷ್ಟು ಸಮಯದಲ್ಲಿ ಇತ್ಯರ್ಥ ಮಾಡಲಾಗುವುದು ?

ಈ) ಮಂಜೂರಾದ ಮಾಸಾಶನವು ಪ್ರತಿಯೊಬ್ಬರಿಗೂ ಪ್ರತಿ ತಿಂಗಳೂ ಬಟವಾಡೆ ಆಗುತ್ತಿದೆಯೇ, ಇಲ್ಲವಾದಲ್ಲಿ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

| | | ೧೯೮೫-೮೬ | ೧೯೮೬-೮೭ | ೧೯೮೭-೮೮ |
|---|---|---|---|---|
| ಅ) | ವಿಧವಾ ಮಾಸಾಶನ | ೧೮೦೨ | ೫೪೮ | ೭೭೬ |
| | ವೃದ್ಧಾಪ್ಯ ವೇತನ | ೩೯೩ | ೨೨೬ | ೨೬೪ |
| | ಅಂಗವಿಕಲ ವೇತನ | ೨೨೦ | ೩೦೬ | ೨೪೨ |
| ಆ) | ವೃದ್ಧಾಪ್ಯ ವೇತನ | —೧೫೦ | | |
| | ಅಂಗವಿಕಲ ವೇತನ | —೧೦೩ | | |
| | ವಿಧವಾ ಮಾಸಾಶನ | —೪೮೬ | | |

ಇ) ಇನ್ನು ೩ ತಿಂಗಳಿನಲ್ಲಿ ಇತ್ಯರ್ಥ ಮಾಡಲಾಗುವುದು.

ಈ) ವೃದ್ಧಾಪ್ಯ ವೇತನವನ್ನು ನಿಯಮಿತವಾಗಿ ಬಟವಾಡೆ ಮಾಡಲಾಗುತ್ತಿದೆ. ಅಂಗವಿಕಲ ವೇತನ ಮತ್ತು ವಿಧವಾ ಮಾಸಾಶನಗಳ ಬಟವಾಡೆಯಲ್ಲಿ ಸ್ವಲ್ಪ ವಿಳಂಭವಾಗಿದ್ದು ಇದು ಜಿಲ್ಲಾ ಖಜಾನೆಯಲ್ಲಿ ಎಂ.ಒ. ಕಳುಹಿಸಲು ಸಾಕಷ್ಟು ಸಿಬ್ಬಂದಿ ಇಲ್ಲದೆ ಇರುವುದರಿಂದ ಆಗುತ್ತಿದೆ. ಇವುಗಳನ್ನು ಸಹ ಸಕಾಲದಲ್ಲಿ ಕಳುಹಿಸಲು ಸಾಕಷ್ಟು ಪ್ರಯತ್ನ ನಡೆಸಲಾಗುತ್ತಿದೆ.